**ಸಾಕ್ಷಿಯನ್ನು ದಿಃ 17.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 19 ಎಂದು,

ಒಟ್ಟು 3 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 20 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ. 21 ಎಂದು, ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಅಪಘಾತದ ಬಗ್ಗೆ ಕೇಸ್ ಶೀಟ್ ಆಧಾರದ ಮೇಲೆ ನಮೂದಿಸಿದ್ದೇನೆ. ಅರ್ಜಿದಾರರು ದಿಃ 18.02.2024 ರಂದು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ದಿಃ 22.02.2024 ರಂದು ಬಿಡುಗಡೆಗೊಂಡಿದ್ದಾರೆ. ಮೊದಲನೇಯದಾಗಿ ಕರ್ತವ್ಯದಲ್ಲಿದ್ದ ವೈದ್ಯರು ಪರೀಕ್ಷಿಸಿದ್ದಾರೆ. ಅರ್ಜಿದಾರರಿಗೆ L1 burst fracture ಆಗಿತ್ತು ಅವರಿಗೆ pedicle screw fixation ಮಾಡಿದ್ದೇನೆ. ಅರ್ಜಿದಾರರಿಗೆ ಆಗಿರುವ ಗಾಯಗಳು ಎತ್ತರದಿಂದ ಬಿದ್ದಾಗ ಮತ್ತು ಮೆಟ್ಟಿಲಿನಿಂದ ಜಾರಿ ಬಿದ್ದರೂ ಆಗುತ್ತದೆ ಎಂದರೆ ಸರಿ. ಇಂಪ್ಲಾಂಟ್ಸ್ ಇನ್ನೂ ತೆಗೆದಿರುವುದಿಲ್ಲ. ಬಿಡುಗಡೆಯ ನಂತರ ಮುಂದುವರೆದ ಚಿಕಿತ್ಸೆಗೆ ಅರ್ಜಿದಾರರು ಬಂದಿದ್ದಾರೆ. ಆ ಬಗ್ಗೆ ಹೊರರೋಗಿ ಚೀಟಿಯಲ್ಲಿ ನಮೂದಿಸುತ್ತೇವೆ. ಇತ್ತೀಚಿನ ಹೊರರೋಗಿ ಚೀಟಿಯನ್ನು ಹಾಜರು ಪಡಿಸಿದ್ದೇನೆ.

2. ಅರ್ಜಿದಾರರು 4-5 ಬಾರಿ ಬಂದಿದ್ದಾರೆ. ಇಂಪ್ಲಾಟ್ಸ್ ಇರುವಾಗ ನ್ಯೂನತೆ ಗೂ ಇಂಪ್ಲಾಟ್ಸ್ ತೆಗೆದ ನಂತರ ನ್ಯೂನತೆಗೂ ವೆತ್ಯಾಸ ಬರುತ್ತದೆ ಎಂದರೆ ಸರಿಯಲ್ಲ. ಇಂಪ್ಲಾಟ್ಸ್ ಇದ್ದ ಕಾರಣ ಗಾಯಾಳುವಿಗೆ ಮುಂಭಾಗ ಹಾಗೂ ಹಿಂಭಾಗಕ್ಕೆ ಬಾಗುವಾಗ ನೋವಾಗುತ್ತದೆ ಎಂದರೆ ಇರಬಹುದು. ಅರ್ಜಿದಾರರಿಗೆ ಆದ ಗಾಯಗಳು ಸಾಮಾನ್ಯವಾಗಿ ಮೂರು ತಿಂಗಳಲ್ಲಿ ಗುಣವಾಗುತ್ತದೆ. ಅರ್ಜಿದಾರರಿಗೆ ಅಪಘಾತ ಆಗಿ ಎರಡು ವರ್ಷ ಆಗಿರುತ್ತದೆ. ಗಾಯಾಳುವಿನ ಹೇಳಿಕೆಯ ಆಧಾರದ ಮೇಲೆ ಪ್ರಮಾಣ ಪತ್ರದಲ್ಲಿ ಅವರ ತೊಂದರೆ ಬಗ್ಗೆ ಬರೆದಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ಪರೀಕ್ಷಿಸಿದ್ದೇನೆ ಎನ್ನುತ್ತಾರೆ. ಸ್ಪೈನಲ್ ಕಾರ್ಡ್ ಗೆ ತೊಂದರೆ ಆಗಿಲ್ಲ. ಇಂಟ್ಯಾಕ್ಟ್ ಇದೆ ಎನ್ನುತ್ತಾರೆ. ಗಾಯಾಳುವಿಗೆ ನರಗಳಿಗೆ ತೊಂದರೆ ಆಗಿರುವ ಕಾರಣ ಯಾವುದೇ ತೀವ್ರ ಸ್ವರೂಪದ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಗಿರುವ ತೊಂದರೆಗಳು ವಯಸ್ಸಿಗೆ ಸಂಬಂಧಪಟ್ಟು ಆಗಿರಬಹುದು ಎಂದರೆ ಇರಬಹುದು. ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದೆ. ನಾನು ಅರ್ಜಿದಾರರಿಗೆ ಸಹಾಯ ಮಾಡಲು ಉತ್ಪ್ರೇಕ್ಷೆಯಿಂದ ನ್ಯೂನತೆಯನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.